**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2153

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 18.03.2022.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಈ ಹಿಂದೆ ಸರ್ಕಾರ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಿಗೆ 10 ಚ.ಮೀ ಒಳಗಿನ ವಿಸ್ತೀರ್ಣದ ನಿವೇಶನಗಳ ಬಡಾವಣೆಗೆ ಅನುಮೋದನೆ ನೀಡಿರುವ ಪ್ರಾಧಿಕಾರ ಯಾವುದು; | ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಜಮೀನಿನ ವಿಸ್ತೀರ್ಣವು 1000 ಚದರ ಮೀಟರ್ (0.10 ಹೆಕ್ಟೇರ್ಸ್) ಅಥವಾ ಕಡಿಮೆ ಇದ್ದಲ್ಲಿ ಏಕನಿವೇಶನ ವಸತಿ / ವಸತಿಯೇತರಗಾಗಿ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸಕ್ಕೆ ಅನುಮೋದನೆಯನ್ನು ಮಾಡಲು ಗ್ರಾಮ ಪಂಚಾಯತಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 132 ಗ್ರಾಪಂಅ 2015, ದಿನಾಂಕ:19-03-2015 ರಲ್ಲಿ ಅಧಿಕಾರ ನೀಡಲಾಗಿತ್ತು. |
| (ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 10 ಚ.ಮೀ. ನಿಂದ 1 ಎಕರೆ ವಿಸ್ತೀರ್ಣದ ನಿವೇಶಗಳ ಬಡಾವಣೆಗೆ ಅನುಮೋದನೆ ನೀಡುವ ಪ್ರಾಧಿಕಾರ ಯಾವುದು; | ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಜಮೀನಿನ ವಿಸ್ತೀರ್ಣವು 1000 ಚದರ ಮೀಟರ್ (0.10 ಹೆಕ್ಟೇರ್ಸ್) ಗಿಂತ ಹೆಚ್ಚಿದ್ದು, ಒಂದು ಎಕರೆಗಿಂತ ಕಡಿಮೆ ಇರುವ ಪ್ರದೇಶದಲ್ಲಿನ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸಕ್ಕೆ ಅನುಮೋದನೆಯನ್ನು ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು ದಿನಾಂಕ:11-11-2014 ರ ಸರ್ಕಾರದ ಪತ್ರದಲ್ಲಿನ ಮಾರ್ಗಸೂಚಿ ಕಂಡಿಕೆ 1.1 ರಿಂದ 1.4 ರ ವರೆಗೆ ವಿವರಿಸಿದ ಕ್ರಮಗಳನ್ನು ಅನುಸರಿಸಿ ಮಾಡಲು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 132 ಗ್ರಾಪಂಅ 2015, ದಿನಾಂಕ:19-03-2015 ರಲ್ಲಿ ಅಧಿಕಾರ ನೀಡಲಾಗಿತ್ತು. |
| (ಇ) | ಈ ಹಿಂದೆ ಗ್ರಾಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ನಿಂದ ನೀಡಿದ ಅಧಿಕಾರ ಹಿಂಪಡೆಯಲಾಗಿದೆಯೇ; | ಹೌದು.<br><br>ಶ್ಯಾಮ ಪ್ರಸಾದ್ ಮುಖರ್ಜಿ ರೂರ್ಬನ್ ಮಿಷನ್(SPMRM) ರಡಿ Integrated Cluster Action Plan(ICAP) ಗಳನ್ನು ರಾಜ್ಯದ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಅವಕಾಶದಡಿ ಕೈಗೊಳ್ಳಬೇಕಾಗಿದೆ ಎಂದು Minister of Rural Development, Panchayati Raj |
| (ಈ) | ಇದರಿಂದ, ತುಂಡು ಭೂಮಿಯನ್ನು ಹೊಂದಿರುವ ರೈತರು ಮನೆ ಹಾಗೂ ಇತರೆ ನಿರ್ಮಾಣಕ್ಕಾಗಿ | |

| | | |
|---|---|---|
| | ಇ–ಸ್ವತ್ತು ದಾಖಲಾತಿ ಪಡೆಯಲು ಜಿಲ್ಲಾ ಕೇಂದ್ರಗಳಿಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೇ; | and Drinking Water & Sanitation, Govt of India ರಲ್ಲಿ ಉಲ್ಲೇಖಿಸಲಾಗಿದೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯೋಜನಾಬದ್ಧವಾಗಿ ಬಡಾವಣೆಗಳ ನಿರ್ಮಾಣವನ್ನು ಸಹಾ ಕೈಗೊಳ್ಳಲು ಒತ್ತು ನೀಡಲು ಉಲ್ಲೇಖಿಸಲಾಗಿದೆ. ಹಾಗಾಗಿ ಗ್ರಾಮೀಣ ಪ್ರದೇಶದ ಯೋಜಿತ ಬೆಳವಣಿಗೆಯ ದೃಷ್ಟಿಯಿಂದ ಬಡಾವಣೆಗಳ ಅಭಿವೃದ್ಧಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ತಾಂತ್ರಿಕ ಅನುಮೋದನೆ ನೀಡುವುದು ಅವಶ್ಯವಿರುತ್ತದೆ.<br>ಗ್ರಾಮೀಣ ಪ್ರದೇಶಗಳ ಯೋಜಿತ ಬೆಳವಣಿಗೆಯ ಹಿನ್ನೆಲೆಯಲ್ಲಿ ದಿನಾಂಕ:07–10–2021 ರಂದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ ತಿದ್ದುಪಡಿ ತಂದು ಹೊಸದಾಗಿ ಕಲಂ 4–I, 4–J ಹಾಗೂ 4–K ಸೇರ್ಪಡೆಗೊಳಿಸಲಾಗಿದೆ. ಸದರಿ ಕಾಯ್ದೆಯ ಕಲಂ 4–K ರನ್ವಯ ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಯಾವುದೇ ಭೂಮಿಯ ಅಭಿವೃದ್ಧಿಗೆ ಸ್ಥಳೀಯ ಸಂಸ್ಥೆ ಅನುಮತಿ ನೀಡುವ ಮೊದಲು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಥವಾ ಅವರಿಂದ ಅಧಿಕೃತಗೊಂಡ ನಗರ ಯೋಜನಾ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದೆ ಯಾರೇ ಅಧೀನ ಅಧಿಕಾರಿಯ ಪೂರ್ವಾನುಮೋದನೆ ಪಡೆಯಬೇಕಾಗಿರುತ್ತದೆ. ಆದ್ದರಿಂದ ಯೋಜನಾ ದೃಷ್ಟಿಯಿಂದ ಸದರಿ ಆದೇಶವನ್ನು ಹಿಂಪಡೆಯುವುದು ಸೂಕ್ತವಾಗಿರುವುದಿಲ್ಲ. |
| (ಉ) | ಸಾರ್ವಜನಿಕರ ಹಿತದೃಷ್ಟಿಯಿಂದ ಈ ಆದೇಶವನ್ನು ಸರ್ಕಾರ ಹಿಂಪಡೆಯುವುದೇ? | |

ಸಂ. ಗ್ರಾಅಪ 119 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.